**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ. 1080/2020

ಸಿ.ಡಬ್ಲೂಃ 4 ಪಿ.ಡಬ್ಲೂಃ 3

ಹೆಸರುಃ ಬಸಪ್ಪ

ತಂದೆಯ ಹೆಸರುಃ ಹುಚ್ಚಪ್ಪ ಚಲವಾದಿ

ವಯಸ್ಸುಃ 50 ವರ್ಷ

ಉದ್ಯೋಗಃ ಕೆ ಎಸ್ ಆರ್ ಟಿ ಕಂಡಕ್ಟರ್

ವಿಳಾಸಃ ಮುದೇನಗುಡಿ ತಾಃ ರೋಣ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 25/07/2024 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ</u>**

**1.** ಚಾಸಾ–1 ನನ್ನ ಹೆಂಡತಿ. ಚಾಸಾ–5 ಮತ್ತು ಚಾಸಾ–6 ನನ್ನ ಹೆಣ್ಣು ಮಕ್ಕಳು. ಚಾಸಾ–7 ನನ್ನ ಮಗ. ಆರೋಪಿತರು ನಮ್ಮ ಅಣ್ಣ ತಮ್ಮಂದಿರು. ಸಿದ್ದವ್ವ ಮತ್ತು ಸಂಗಪ್ಪ ಇವರು 2008 ರಲ್ಲಿ ನನಗೆ ಎರಡು ಗುಂಟೆ ಜಾಗವನ್ನು ಮುದೇನಗುಡಿ ಚಲವಾದಿ ಓಣಿಯಲ್ಲಿ ಖರೀದಿಗೆ ಕೊಟ್ಟಿದ್ದರು. ಮೊದಲು ನನಗೆ ಜಾಗ ಇರಲಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ನನಗೆ ಒಂದು ಪ್ಲಾಟ್ ಬಂತು. ಆಗ ನಾನು ಸಿದ್ದವ್ವ ಚಲವಾದಿ ಇವರಿಗೆ ಪ್ಲಾಟ್ ಹಾಕಿಸಿಕೊಳ್ಳಲು ಜಾಗ ಕೇಳಿದೆ. ಆ ಎರಡು ಗುಂಟೆ ಜಾಗದಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಸರಕಾರದಿಂದ ಹಣ ಪಡೆದುಕೊಂಡು ತಗಡಿನ ಮನೆ ಕಟ್ಟಿಸಿದೆ. 2008 ರಿಂದ 2020 ರವರೆಗೆ ಸಿದ್ದವ್ವ ಮತ್ತು ಸಂಗಪ್ಪ ಸುಮ್ಮನಿದ್ದರು. ಸದರಿ ಆಸ್ತಿ ನಮಗೆ ಖರೀದಿ ಗೆ ಕೊಟ್ಟಿದ್ದರೂ ಸಹ ಅದು ಸಬ್ ರಜಿಸ್ಟರ ಆಫೀಸ್ ನಲ್ಲಿ ನೊಂದಣಿಯಾಗಿರುವುದಿಲ್ಲ. ಗುರು ಹಿರಿಯರ ಮುಖಾಂತರ ಸಂಚಗಾರ ಪತ್ರ ಆಗಿತ್ತು. ಆ ಸಮಯದಲ್ಲಿ ಗುಂಟೆವಾರು ಖರೀದಿ ಮಾಡಲು ಸಬ್ ರಜಿಸ್ಟರ ಆಫೀಸ್ ನಲ್ಲಿ ಬರುತ್ತಿರಲಿಲ್ಲ. ಆ ಆರು ತಿಂಗಳಿಗೊಮ್ಮೆ ಸಿದ್ದವ್ವ ಮತ್ತು ಸಂಗಪ್ಪ ನನ್ನು ಕರೆಯುತ್ತಿದ್ದೇವು, ನೊಂದಣಿ ಮಾಡಿಸಲು ಕೇಳುತ್ತಿದ್ದೇವು. 2020 ರ ತನಕ ನಾನು ಪದೇ ಪದೇ ಕೇಳುತ್ತಿದ್ದೆ. 2020 ರಲ್ಲಿ ಸಿದ್ದವ್ವ ಮತ್ತು ಸಂಗಪ್ಪ ಆ ಮನೆಯನ್ನು ಬಿಟ್ಟು ಕೊಡು, ಆ ಜಾಗದಲ್ಲಿ ಕಟ್ಟಿಗೆ ಹಾಕಲು ಕೊಟ್ಟಿದ್ದೇವು, ನೀನು ಮನೆ ಏಕೆ ಹಾಕಿಸಿದೆ ಎಂದು ಕೇಳುತ್ತಿದ್ದರು. 15 ವರ್ಷಗಳಿಂದ ಅದೇ ಮನೆಯಲ್ಲಿ ವಾಸವಿದ್ದರು ಸುಮ್ಮನೆ ಇದ್ದರು. ಮನೆ ಯ ಹತ್ತಿರ 2020 ರಲ್ಲಿ ಮನೆ ಬಿಡು ಎಂದು ಗಲಾಟೆ ಮಾಡಿದರು. ದಿನಾಂಕ 10/06/2020 ರಂದು ಸಂಜೆ 4–30 ರಿಂದ 5–00 ಗಂಟೆಗೆ ಡ್ಯೂಟಿ ಮುಗಿಸಿ ಬಂದೆ. ಅಷ್ಟರಲ್ಲಿ ಮನೆಯ ಮುಂದೆ ಗಲಾಟೆ ನಡೆದಿತ್ತು. ಅಲ್ಲಿ ಸಿದ್ದವ್ವ ಚಲವಾದಿ ಮತ್ತು ಸಂಗಪ್ಪ ಚಲವಾದಿ ಮತ್ತು

ಹನಮಂತ ಚಲವಾದಿ, ನೀಲವ್ವ ಚಲವಾದಿ, ಬಸವ್ವ ಚಲವಾದಿ ಇದ್ದರು. ಓಣಿಯ ಮಂದಿ ಇದ್ದರು. ಅಲ್ಲಿ ಬಾಯಿ ಮಾಡುತ್ತಾ ಇದ್ದರು. ನಮ್ಮ ನ್ನು ಅವರು ಬಡೆದಿರಲಿಲ್ಲ, ನಾವು ಸಹ ಅವರನ್ನು ಬಡೆದಿರಲಿಲ್ಲ. ನಾನು ಹೋದ ನಂತರ ನಮ್ಮ ಹೆಣ್ಣು ಮಕ್ಕಳನ್ನು ಬೆದರಿಸಿ ಮನೆಗೆ ಕರೆದುಕೊಂಡು ಹೋದೆ. ಅವರಿಗೂ ಸಹ ಬೆದರಿಸಿ ಅವರ ಮನೆಗೆ ಕಳುಹಿಸಿದೆ. ಅವರುಗಳು ಅವರ ಹೆಣ್ಣು ಮಕ್ಕಳು ಕರೆದುಕೊಂಡು ಹೋದರು. ಆದರೂ ಸಹ ಸುಳ್ಳು ಅಪವಾದ ಹೊರೆಸಿ ನಾವು ಬಡೆದಿದ್ದೇವೆ ಎಂದು ಸುಳ್ಳು ಕೇಸ್ ಕೊಟ್ಟರು. 14/06/2020 ರಂದು ನಾವು ಸಹ ಒಂದು ದೂರು ಕೊಟ್ಟೆವು. ದೂರಿನಲ್ಲಿ ಗಲಾಟೆಯಾದ ಬಗ್ಗೆ ಬರೆದೆವು. ನನ್ನ ಹೆಂಡತಿಯಾಗಲಿ ಅಥವಾ ಮಕ್ಕಳಾಗಲಿ ಆರೋಪಿತರಿಗೆ ಹೊಡೆದಿಲ್ಲ. ಅವರು ಸಹ ನಮಗೆ ಹೊಡೆದಿಲ್ಲ. ಆ ಜಾಗದ ಸಂಬಂಧ ಈ ರೀತಿ ಸುಳ್ಳು ದೂರು ಕೊಟ್ಟಿದ್ದಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಪಿ ಕೆ ಯು ವಕೀಲರಿಂದಃ**

2008 ರಲ್ಲಿ ಸಿದ್ದವ್ವ ಮತ್ತು ಸಂಗಪ್ಪ ಜಾಗವನ್ನು ಖರೀದಿ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಮನೆಯನ್ನು ಕಟ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಜಾಗ ಸಿದ್ದವ್ವ ಮತ್ತು ಸಂಗಪ್ಪ ಇವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ನಾವು ಮೊದಲಿನಿಂದಲೂ ಆ 2 ಗುಂಟೆಯ ಜಾಗವನ್ನು ಎತ್ತಿಹಾಕಬೇಕೆಂಬ ದುರಾಲೋಚನೆ ಹೊಂದಿದ್ದೇವು ಎಂದರೆ ಸರಿಯಲ್ಲ. ಯಾವುದೇ ಕಾಗದ ಪತ್ರವನ್ನು ಬರೆದು ಕೊಡದೇ ಇದ್ದರೂ ಸಹ ನಾವು ಖೊಟ್ಟಿ ಕಾಗದ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವುಗಳೇ ಆರೋಪಿತರಿಗೆ 10/06/2020 ಹೊಡೆದು ಹಲ್ಲೆ ಮಾಡಿದ್ದೇವು, ಈ ಬಗ್ಗೆ ಆರೋಪಿತರು ರೋಣ ಪೊಲೀಸ್ ಠಾಣೆಯಲ್ಲಿ ಗುನ್ನಾ ನಂಬರ 74/2020 ರಲ್ಲಿ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ದೂರು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಾವು ಸಿಟ್ಟಾಗಿ ಸುಳ್ಳು ಕೇಸ್ ನ್ನು ಆರೋಪಿತರ ವಿರುದ್ಧ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**